■ ದೀಪಶ್ರೀ ಎಸ್ ಕೂಡ್ಲಿಗಿ
ಕಲೆ: ಸಂತೋಷ್ ಸಸಿಹಿತ್ಲು

# ತ್ರಿಕೋನ ಕೊಲೆ

ಮಧ್ಯಾಹ್ನ ಊಟ ಮಾಡುತ್ತಿರುವಾಗ, ಡಾಕ್ಟರ್ ರಘುರಾಮರಾಯರ ಫೋನು ರಿಂಗಣಿಸಿತು. ಫೋನ್ ಕರೆ ಸ್ವೀಕರಿಸಿದ ಡಾಕ್ಟರ್, 'ಹಲೋ ಯಾರು'? ಎಂದವರಿಗೆ, ಮತ್ತೊಂದು ಬದಿಯಿಂದ ಅನಾಮಿಕನೊಬ್ಬ ಉತ್ತರ ನೀಡಿದ.

'ನಾನು ಯಾರಾದರೆ ನಿನಗೇನು?, ಸುಮ್ಮನೆ ನಾನು ಹೇಳುವುದನಷ್ಟೇ ಮಾಡು. ನೀನು ನಿನ್ನ ಆತ್ಮೀಯ ತಾಯಿಯಂತಿರುವ ನರ್ಸ್ ಲಕ್ಷ್ಮಮ್ಮಳನ್ನು ಸಾಯಿಸದೇ ಇದ್ದರೆ ನಿನ್ನ ಸಾವು ಕಟ್ಟಿಟ್ಟ ಬುತ್ತಿ' ಎಂದವನೇ, ಫೋನನ್ನು ಟಕ್ ಎಂದು ಕಟ್ ಮಾಡಿದ್ದ. ರಾಯರ ಮುಖ ಬೆವರಿನಲ್ಲಿ ಒದ್ದೆಯಾಗಿತ್ತು. ಕೈಗಳು ಅದುರುತ್ತಿದ್ದವು. ಗಾಬರಿಯಿಂದ ಏದುಸಿರು ಬಿಡುತ್ತಿದ್ದ ರಾಯರ ಕಣ್ಣು ಆತಂಕದ ಮುದ್ದೆಯಾಗಿದ್ದವು. ಕರ್ಚೀಫಿನಿಂದ ಮುಖ ಒರೆಸಿಕೊಂಡು, ಟೇಬಲ್ ಮೇಲಿದ್ದ ನೀರು ಕುಡಿದು, ಊಟ ಅರ್ಧಕ್ಕೆ ನಿಲ್ಲಿಸಿ ಕೈ ತೊಳೆದಿದ್ದರು. ತನಗೆ ಕರೆ ಮಾಡಿದ ಆ ಅನಾಮಿಕ ಯಾರಿರಬಹುದು ಎಂಬ ಗಾಬರಿಯಿಂದ ಸಂಜೆ ಕಾರು ಚಲಾಯಿಸುತ್ತಾ ಮಧ್ಯರಾತ್ರಿ ಮನೆ ಸೇರಿದ್ದರು. ನಡೆದ ಘಟನೆಯನ್ನೆಲ್ಲಾ ಪತ್ನಿ ಸುನಂದಾ, ಮಗ ಆದಿಗೆ ಭಯದಲ್ಲಿ ವಿವರಿಸಿದರು.

'ರೀ, ಭಯಪಡಬೇಡಿ. ಬೆಳಗ್ಗೆ ಪುನಃ ಇದೇ ರೀತಿ ಕರೆ ಬಂದರೆ ಪೊಲೀಸ್ ಕಂಪ್ಲೇಂಟ್ ಕೊಡೋಣ ಧೈರ್ಯವಾಗಿರಿ' ಎಂದಳು.

'ಹೌದು ಡ್ಯಾಡ್ ಹೆದರಬೇಡಿ' ಎಂದ ಮಗ.

ರಘುರಾಮರಾಯರು ಪತ್ನಿ ಹಾಗೂ ಮಗನ ಸಮಾಧಾನದ ಮಾತಿನಿಂದ ನಿದ್ರೆಗೆ ಜಾರಿದ್ದರು. ನಡೆದ ಘಟನೆ ಸಾವರಿಸಿಕೊಂಡು, ಇದು ಕೇವಲ ನನ್ನನ್ನು ಬೆದರಿಸುವ ತಂತ್ರ ಇರಬಹುದೆಂದು ಮರುದಿನ ಮುಗುಳುನಗೆ ಬೀರುತ್ತಾ ಕಾರು ಚಲಾಯಿಸುತ್ತಿರುವ ರಾಯರಿಗೆ ಅದೇ ನಗೆಯೇ ಕೊನೆ ನಗೆಯಾಗಿತ್ತು. ಅನಾಮಿಕನ ಬೆದರಿಕೆ ಕರೆಗೆ ಜಗ್ಗದ, ಬಗ್ಗದ ಡಾಕ್ಟರ್ ಕೊಲೆಯಾಗಿ ಹೋಗಿದ್ದರು. ತಾಯಿಯಂತೆ ಮಮತೆ ತೋರಿದ್ದ ನರ್ಸ್ ಲಕ್ಷ್ಮಮ್ಮ ಸಹ ಅದೇ ದಿನ ರಾತ್ರಿ ಹೆಣವಾಗಿ ಮಲಗಿದ್ದಳು.

ಡಾಕ್ಟರ್ ರಘುರಾಮರಾಯರು ಹೆಸರಾಂತ ವೈದ್ಯರು. ಜನಸೇವೆ ಮಾಡುವ ಸಾರ್ಥಕ ಜೀವಿ, ತಮ್ಮ ವೈದ್ಯ ವೃತ್ತಿಯಿಂದ ಬಡವರ ಸೇವೆ ಮಾಡುತ್ತಾ ಹೆಂಡತಿ, ಮಗನೊಂದಿಗೆ ಸುಖವಾಗಿದ್ದರು. ಇವರದೇ ಆಸ್ಪತ್ರೆಯಲ್ಲಿ ಹತ್ತು ವರ್ಷಗಳಿಂದ ನರ್ಸ್ ಲಕ್ಷ್ಮಮ್ಮ ಸೇವೆ ಸಲ್ಲಿಸುತ್ತಿದ್ದರು. ರಘುರಾಮರಾಯರ ಆಸ್ಪತ್ರೆಯದ್ದು ಜನಾರ್ದನ ಸೇವೆಯೇ ಆಗಿತ್ತು.
ಹತ್ತು ವರ್ಷಗಳಿಂದ

